
## ನೆನಪಿನ ಶಕ್ತಿ



ಸಂಜು ಮತ್ತು ಮಂಜು ಆತ್ಮೀಯ ಗೆಳೆಯರು. ಸಂಜು ಶ್ರೀಮಂತ, ಮಂಜು ಬಡವ. ಒಂದು ದಿನ ಇಬ್ಬರೂ ಮನೆಯ ಅಂಗಳದಲ್ಲಿ ಕುಳಿತು ಮಾತನಾಡುತ್ತಿರುವಾಗ ಸಂಜು ಕೇಳಿದ, 'ಮಂಜು, ನನಗೆ ಇತ್ತೀಚೆಗೆ ಯಾವುದೂ ನೆನಪಿನಲ್ಲಿ ಉಳಿಯುವುದಿಲ್ಲ, ಏನು ಮಾಡಲಿ?' ಆಗ ಮಂಜು ಹೇಳಿದ, 'ಅದಕ್ಕೆ ಯಾಕಿಷ್ಟು ಚಿಂತೆ ಮಾಡುವೆ. ನಾನೊಂದು ಉಪಾಯ ಹೇಳುತ್ತೇನೆ ಹಾಗೆ ಮಾಡು. ನಿನ್ನ ಹತ್ತಿರ ಹೇಗೂ ಸಾಕಷ್ಟು ಹಣವಿದೆಯಲ್ಲ, ಅದನ್ನು ಹತ್ತಾರು ಜನರಿಗೆ ಸಾಲ ಕೊಡು. ನಿನ್ನ ನೆನಪಿನ ಶಕ್ತಿ ತನ್ನಿಂದ ತಾನೆ ಹೇಗೆ ಹೆಚ್ಚಾಗುತ್ತದೆ ನೋಡು' ಎಂದ.

**ನರಸಿಂಹ ಪೈ**



ಚಿತ್ರಗಳು: ಗಣೇಶ ಆಚಾರ್ಯ

## ಎಕ್ಸ್‌ಚೇಂಜ್ ಆಫರ್

ನಂಜ ಹೆಂಡತಿಯೊಂದಿಗೆ ರಸ್ತೆಯಲ್ಲಿ ಹೋಗುತ್ತಿದ್ದ. ಅಲ್ಲೊಂದು ಕಡೆ ಮಿಕ್ಸಿ ಎಕ್ಸ್‌ಚೇಂಜ್ ಎಂದು ದೊಡ್ಡ ಜಾಹೀರಾತನ್ನು ಹಾಕಿದ್ದರು. ಅದರಲ್ಲಿ ಸುಂದರವಾದ ಹುಡುಗಿ ಕೈಯಲ್ಲಿ ಮಿಕ್ಸಿ ಹಿಡಿದುಕೊಂಡು ನಿಂತಿದ್ದ ಚಿತ್ರವಿತ್ತು. ನಂಜ ಅದನ್ನೇ ತುಂಬಾ ಹೊತ್ತು ನೋಡುತ್ತ ನಿಂತ. ಆಗ ಹೆಂಡತಿ ಹೇಳಿದಳು: 'ನೋಡಿದ್ದು ಸಾಕು ಬನ್ನಿ. ಅಲ್ಲಿ ಬರೆದಿರುವುದು ಮಿಕ್ಸಿ ಎಕ್ಸ್‌ಚೇಂಜ್ ಅಂತ, ಹೆಂಡತಿ ಎಕ್ಸ್‌ಚೇಂಜ್ ಅಲ್ಲ!'

**ವಿ. ಹೇಮಂತಕುಮಾರ್**